**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 805/2021**

| | | | |
|---|---|---|---|
| **ಹೆಸರು** | : | **ದಿನಕುಶ್ಬೇಗಂ** | **ದೋ.ಸಾ. 5** |
| **ಗಂಡನ ಹೆಸರು** | : | **ಮಹೆಮೂದ ಸಾಬ** | **ಪ್ರಾ.ಸಾ. 5** |
| **ವಯಸ್ಸು** | : | **30 ವರ್ಷ** | **ದಿನಾಂಕಃ 10-04-2023** |
| **ಉದ್ಯೋಗ** | : | **ಗೃಹಿಣಿ** | |
| **ವಾಸಸ್ಥಳ** | : | **ಕುಪನೂರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ಪ್ರಾಸಾ-1, ರಿಂದ 4 ರವರು ನನಗೆ ಗೊತ್ತು. ಮೃತ ನಾಗಪ್ಪ ನನಗೆ ಗೊತ್ತು.ನಾಗಪ್ಪ ಮೃತಪಟ್ಟಿದ್ದಾನೆ.

ಮೃತ ನಾಗಪ್ಪ ಆಟೋದಿಂದ ಬಿದ್ದು ಮೃತಪಟ್ಟಿದ್ದನು. ಅದೇ ಆಟೋದಲ್ಲಿ ನಾನು ಸಹ ಇದ್ದೇನು. ನನ್ನ ಜೊತೆ 12 ಜನರು ಆಟೋದಲ್ಲಿ ಇದ್ದರು. ಸುಮಾರು ಮೂರು ವರ್ಷಗಳ ಹಿಂದೆ ಪ್ರಾಸಾ-2 ರವರ ಆಟೋದಲ್ಲಿ ಹೊರಟಾಗ ಕುಪನೂರಗೆ ಹೋಗುವ ರಸ್ತೆಯಲ್ಲಿ ಅಪಘಾತ ಆಗಿತ್ತು. ನಾಗಪ್ಪನು ಸದರಿ ಅಪಘಾತದ ಕಾರಣ ಮೃತಪಟ್ಟಿದ್ದ ಹಾಗೂ ಪ್ರಾಸಾ-3 ರವರ ಕೈ ಮುರಿದಿತ್ತು. ನನಗೆ ಮೂಗಿಗೆ ಹಾಗೂ ತಲೆಗೆ ಗಾಯಗಳಾಗಿದ್ದವು ಹಾಗೂ ನನ್ನ ಮಗನಿಗೆ ತಲೆಗೆ ಗಾಯವಾಗಿತ್ತು. ನಿಪಿ-3 ರಲ್ಲಿರುವ ಆಟೋದಲ್ಲಿ ನಾವು ಹೊರಟಿದ್ದೇವು ಎಂದರೆ ಸರಿ. ಅಪಘಾತ ಆಗಿರುವ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 09-10-2020 ರಂದು ನಾನು ಸಂತೆ ಮಾಡಿಕೊಂಡು ಮರಳಿ ಕುಪನೂರಿಗೆ ಹೋಗಬೇಕೆಂದು ಬಸವೇಶ್ವರ ಸರ್ಕಲ ಹತ್ತಿರ ಪ್ರಾಸಾ -2 ರವರ ಆಟೋದಲ್ಲಿ ಕುಳಿತಿದ್ದೆ ಎಂದರೆ ಸರಿ. ಆಟೋದಲ್ಲಿ ನಾಗಪ್ಪ ಪ್ರಾಸಾ-2 ಹಾಗೂ ಪ್ರಾಸಾ-4 ರವರ ಇದ್ದರು ಎಂದರೆ ಸರಿ. ನಾವು ಆಟೋದಲ್ಲಿ ಮಹಿಪಾಲರೆಡ್ಡಿ ಇವರ ತೋಟದ ಹತ್ತಿರ ಇದ್ದಾಗ ಎದುರುಗಡೆಯಿಂದ ಒಬ್ಬ ಚಾಲಕನು ಆಟೋವನ್ನು ಅತೀವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದಿದ್ದ

ಎಂದರೆ ಸರಿ. ಆದ್ದರಿಂದ ನಮ್ಮ ಆಟೋ ಪಲ್ಟಿಯಾಗಿ ಬಿದ್ದಿತ್ತು ಎಂದರೆ ಸರಿ. ಸದರಿ ಆಟೋದ ಕೆಳಗಡೆ ಪ್ರಾಸಾ-2 ಹಾಗೂ ನಾಗಪ್ಪ ಸಿಕ್ಕಿಬಿದಿದ್ದರು ಎಂದರೆ ಸರಿ. ನಾಗಪ್ಪ ಈತನ ಎಡಭಾಗದ ತಲೆಯ ಮೇಲೆ, ಎಡಭಾಗದ ಕಣ್ಣಿನ ಸಮೀಪ, ಎದೆಯ ಮೇಲೆ ಭಾರಿಗುಪ್ತ ಗಾಯ, ಎಡಪಕ್ಕೆಯ ಮೇಲೆ ಗುಪ್ತಗಾಯ ಹಾಗೂ ಎಡಗೈ ಮೇಲೆ ತರಚಿದ ಭಾರಿ ರಕ್ತಗಾಯ ಆಗಿದ್ದವು ಎಂದರೆ ಸರಿ. ಪ್ರಾಸಾ-3 ಇವಳ ಕೈ ಮುರಿದು ಅಲ್ಲಲ್ಲಿ ಗಾಯಗಳಾಗಿದ್ದವು ಎಂದರೆ ಸರಿ. ನಾನು ಹಾಗೂ ಪ್ರಾಸಾ-4 ರವರು ಕೆಳಗಡೆ ಬಿದಿದ್ದರಿಂದ ನಮಗೆ ಯಾವದೆ ಗಾಯ ಆಗಿರಲಿಲ್ಲ ಎಂದರೆ ಸರಿ. ನಮಗೆ ಡಿಕ್ಕಿಪಡಿಸಿದ ಆಟೋ ಚಾಲಕನು ಇದನ್ನು ಕಂಡು ತನ್ನ ಆಟೋವನ್ನು ಬಿಟ್ಟು ಓಡಿಹೋದನು ಎಂದರೆ ಸರಿ. ಅದರ ಸಂಖ್ಯೆ KA 32 D 7361 ಇತ್ತು ಎಂದರೆ ಸರಿ. ಈ ಘಟನೆ ಅಂದಾಜು ಮಧ್ಯಾಹ್ನ 2.30 ಗಂಟೆ ಜರುಗಿತ್ತು ಎಂದರೆ ಸರಿ. ನಾಗಪ್ಪನ ಮೇಲೆ ಆಟೋ ಬಿದ್ದಿದ ಕಾರಣ ನಾಗಪ್ಪ ಮೃತಪಟ್ಟಿರುವ ಬಗ್ಗೆ ತಿಳಿದಿತ್ತು ಎಂದರೆ ಸರಿ. ಈ ರೀತಿ ದಿನಾಂಕಃ 11-10-2020 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ನಿಪಿ-4,5 ರಲ್ಲಿರುವ ಆಟೋದಿಂದ ಅಪಘಾತ ಆಗಿದೆ ಎಂದರೆ ಸರಿ. ಆರೋಪಿಯ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ.**